

## ಸರ್ ಸಿ.ವಿ. ರಾಮನ್

ಫೆಬ್ರವರಿ ೨೮ ರಾಷ್ಟ್ರೀಯ ವಿಜ್ಞಾನ ದಿನಾಚರಣೆ : ಫೆಬ್ರವರಿ ೨೮ ಭಾರತೀಯ ವಿಜ್ಞಾನ ಪರಂಪರೆಗೆ ಒಂದು ಪರ್ವದಿನ. ಭಾರತಕ್ಕೆ ಮೊಟ್ಟಮೊದಲ ನೊಬೆಲ್ ಪ್ರಶಸ್ತಿ ತಂದುಕೊಟ್ಟ ವಿಶ್ವವಿಖ್ಯಾತ ವಿಜ್ಞಾನಿ ಸರ್ ಸಿ.ವಿ. ರಾಮನ್ ಅವರು, ಭಾರತ ಕಂಡ ಓರ್ವ ಅಪೂರ್ವ ವಿಜ್ಞಾನಿ. ರಾಮನ್ ಎಫೆಕ್ಟ್ ಪರಿಣಾಮದ ವಿವರವನ್ನು ಬಹಿರಂಗಪಡಿಸಿದ ದಿನದ ನೆನಪಿಗಾಗಿ ವಿಜ್ಞಾನ ದಿನವನ್ನು ಆಚರಿಸಲಾಗುತ್ತಿದೆ. ಈ ಪ್ರಯುಕ್ತ ವಿಜ್ಞಾನ ಸಂಗಾತಿಯು ಪ್ರಶ್ನೋತ್ತರಗಳಲ್ಲಿ ಸರ್ ಸಿ.ವಿ. ರಾಮನ್ ಎಂಬ ಲೇಖನ ಮಾಲಿಕೆಯನ್ನು ಈ ಸಂಚಿಕೆಯೊಂದಿಗೆ ಪ್ರಕಟಿಸುತ್ತಿದೆ.

# ಪ್ರಶ್ನೋತ್ತರಗಳಲ್ಲಿ ಸರ್ ಸಿ.ವಿ. ರಾಮನ್

**ವಿಜ್ಞಾನ ದಿನಾಚರಣೆ**
**ರಾಮನ್ ನೆನಪು**

**ಸಂಯೋಜನೆ : ಜೈನುಲ್ಲಾ ಬಳ್ಳಾರಿ**

**ಪ್ರಶ್ನೆ ೧ :** ಸಿ.ವಿ. ರಾಮನ್ ಯಾರು? ಅವರ ಪೂರ್ಣ ಹೆಸರೇನು? ಯಾವ ಸಾಧನೆಗಾಗಿ ಅವರು ಪ್ರಸಿದ್ಧರು?

**ಉತ್ತರ :** ನಮ್ಮ ದೇಶ ಕಂಡ ಅಪರೂಪದ ಪ್ರತಿಭಾವಂತ ವಿಜ್ಞಾನಿಗಳಲ್ಲಿ ಸರ್ ಸಿ.ವಿ. ರಾಮನ್ ಪ್ರಮುಖರು. ಬೆಳಕಿನ ವಿಕಿರಣದ ತಮ್ಮ ಶೋಧನೆಗಳಿಂದ ವಿಶ್ವವನ್ನೇ ಬೆರಗುಗೊಳಿಸಿ **ಭಾರತೀಯ ವಿಜ್ಞಾನಕ್ಕೆ ಹೆಮ್ಮೆಯ ಸ್ಥಾನವನ್ನು ಗಳಿಸಿಕೊಟ್ಟ ಮಹಾನ್ ಮೇಧಾವಿ, ವಿಶ್ವವಿಖ್ಯಾತಿ ಭೌತ ವಿಜ್ಞಾನಿ; ಭಾರತದ ಸ್ವಾಭಿಮಾನಿ ಚಳವಳಿಯ ವಿಜ್ಞಾನ ರಂಗದ ನಾಯಕ. ಸ್ವಪ್ರಯತ್ನ ಸಾಧನೆಯ ಮೂಲಕ ನಮ್ಮ ವಿಜ್ಞಾನದ ಯುವಲೋಕಕ್ಕೆ ಅನ್ವೇಷಣೆಯ ದಾರಿಯನ್ನು ನಿರ್ಮಿಸಿಕೊಟ್ಟವರು. ನಮ್ಮ ಮೊಟ್ಟ ಮೊದಲ ಭಾರತದ ರತ್ನ.** ಪೂರ್ಣ ಹೆಸರು **ಚಂದ್ರಶೇಖರ ವೆಂಕಟರಾಮನ್.**

ಬ್ರಿಟಿಷ್ ಆಡಳಿತದ ದಾಸ್ಯದಲ್ಲಿ .ಭಾರತೀಯರು ತೊಳಲಾಡುತ್ತಿದ್ದ ಕಾಲದಲ್ಲಿ ತಮ್ಮ ವೈಜ್ಞಾನಿಕ ಅನ್ವೇಷಣೆಗಳ ಬಲದಿಂದ, ಪ್ರಪಂಚದ ದೃಷ್ಟಿಯನ್ನು ನಮ್ಮ ದೇಶದತ್ತ ಸೆಳೆದವರು. ನಾವು ಸಹ ಯಾರಿಗಿಂತ ಕಮ್ಮಿಯೇನಲ್ಲ ಎಂಬುದನ್ನು ತಮ್ಮ **'ರಾಮನ್ ಪರಿಣಾಮ"** (Raman Effect) ಎಂಬ ವಿಶಿಷ್ಟ ಶೋಧನೆ ಮೂಲಕ ಸಾಬೀತುಪಡಿಸಿದವರು, ಆ ಮೂಲಕ **ಭಾರತಕ್ಕೆ ೧೯೩೦ರಲ್ಲಿ ಮೊಟ್ಟಮೊದಲ ನೊಬೆಲ್ ಪುರಸ್ಕಾರ ದೊರಕಿಸಿಕೊಟ್ಟು, ನಮ್ಮ ಘನತೆಯನ್ನು ಎತ್ತರಿಸಿದರು.**

**ಪ್ರಶ್ನೆ ೨ :** ಸಿ.ವಿ. ರಾಮನ್ ಅವರ ಜನ್ಮದಿನ, ಊರು ಮತ್ತು ಬಾಲ್ಯ ಜೀವನದ ಬಗ್ಗೆ ತಿಳಿಸಿರಿ.

**ಉತ್ತರ :** ಸಿ.ವಿ. ರಾಮನ್ ಅವರು ಹುಟ್ಟಿದ್ದು ೧೮೮೮ನೇ **ಇಸವಿ ನವೆಂಬರ್ ೭ನೇ ತಾರೀಖು** (೭.೧೧.೧೮೮೮). ತಮಿಳು ನಾಡಿನ ತಿರುಚನಾಪಳ್ಳಿ ಹತ್ತಿರದ **ತಿರುವಾನೈಕ್ಕಾವಲ್**(ಅವರ ತಾಯಿಯ ತವರೂರು) ಅವರ ಜನ್ಮಸ್ಥಳ.

ಅವರ ತಂದೆಯ ಹೆಸರು - **ಆರ್. ಚಂದ್ರಶೇಖರ ಅಯ್ಯರ್,** ತಾಯಿಯ ಹೆಸರು - **ಪಾರ್ವತಿ ಅಮ್ಮಾಳ್.** ಈ ದಂಪತಿಗಳಿಗೆ ಒಟ್ಟು ಎಂಟು ಜನ ಮಕ್ಕಳು - ಐವರು ಗಂಡು, ಮೂವರು ಹೆಣ್ಣುಮಕ್ಕಳು; ಎರಡನೆಯ ಪುತ್ರನೇ ಸಿ.ವಿ. ರಾಮನ್. ಅವರ ತಂದೆಯವರು ಕರ್ನಾಟಕದ ಸಂಗೀತದ ಮಹಾಪ್ರೇಮಿ, ಸ್ವತಃ ತಂತಿವಾದ್ಯ(ಪಿಟೀಲು)ವಾದನದಲ್ಲಿ ನಿಪುಣರು. ಅವರ ಜ್ಞಾನ ದಾಹವೂ ಹೆಚ್ಚಿನದು. ಆ ಕಾಲದ ಉತ್ತಮವಾದ ಪುಸ್ತಕಗಳನ್ನೆಲ್ಲ ಖರೀದಿಸಿ ಮನೆಯಲ್ಲಿ ಸಂಗ್ರಹಿಸಿದ್ದರು.



**ಆರ್. ಚಂದ್ರಶೇಖರ ಅಯ್ಯರ್, ಪಾರ್ವತಿ ಅಮ್ಮಾಳ್**

ರಾಮನ್ ಅವರು ಬಾಲ್ಯದಿಂದಲೇ ತೀರಾ ತೆಳ್ಳಗಿದ್ದರು. ತಂದೆ ದೇಹದಾರ್ಢ್ಯವುಳ್ಳ ಕ್ರೀಡಾಪಟು. ಆದರೆ ಮಗ ದೈಹಿವಾಗಿ ಸಣಕಲು ಆಗಿದ್ದರು. ಬಾಲ್ಯದಿಂದಲೇ ವಿಜ್ಞಾನ ಸಾಹಿತ್ಯ, ಸಂಗೀತ-ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಆಸಕ್ತಿ-ಒಲವು ಇತ್ತು. ಅವರ ಕುಟುಂಬ ವಿಶಾಖಪಟ್ಟಣಕ್ಕೆ ಹೋಗಿ ನೆಲೆನಿಂತಾಗ, ಸಮುದ್ರದ ಅಲೆಗಳು, ಏರಿಳಿತ, ಉದಯರವಿ, ಸಂಜೆಯ ಸೊಬಗು, ಪಕ್ಷಿಗಳ ಕಲರವ, ಗಿಡಮರ ಬಳ್ಳಿಗಳು, ಬಣ್ಣ ಬಣ್ಣ ಹೂಗಳು, ನೀಲಿ ಆಕಾಶ ಇತ್ಯಾದಿ ಪ್ರಕೃತಿ ಸೊಬಗು, ವಿಸ್ಮಯಗಳು ಆಕರ್ಷಕರನ್ನಾಗಿ ಮಾಡಿದವು.

**ಪ್ರಶ್ನೆ ೩ :** ರಾಮನ್ ಅವರ ವಿದ್ಯಾಭ್ಯಾಸದ ಹಂತಗಳನ್ನು ವಿವರಿಸಿರಿ.

**ಉತ್ತರ :** ರಾಮನ್ ಅವರು ೪ ವರ್ಷದ ಬಾಲಕರಾಗಿದ್ದಾಗ ತಂದೆ ಚಂದ್ರಶೇಖರ ಅಯ್ಯರ್ ಅವರು ತಮಿಳುನಾಡಿನ ತಮ್ಮ ತವರೂರನ್ನು ತೊರೆದು ಆಂಧ್ರಪ್ರದೇಶದ **ವಿಶಾಖಪಟ್ಟಣಕ್ಕೆ ವಲಸೆ ಬಂದರು.** ಇಲ್ಲಿನ ಎ.ವಿ.ಎನ್. ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿ ಸೇವೆಗೈದರು. ರಾಮನ್ ಅವರ ಬಾಲ್ಯದ ವಿದ್ಯಾಭ್ಯಾಸವು ೧೦ ವರ್ಷಗಳ ಕಾಲ ವಿಶಾಖಪಟ್ಟದಲ್ಲಿ ಸಾಗಿತು.

ಅವರು ೧೧ ವರ್ಷದವರಾಗಿದ್ದಾಗ ವಿಶಾಖಪಟ್ಟಣದಲ್ಲೇ ಮೆಟ್ರಿಕ್ ಪರೀಕ್ಷೆ ಬರೆದು ಮೊದಲ ದರ್ಜೆಯಲ್ಲಿ ಮೊದಲನೇ ರ್‍ಯಾಂಕಿನೊಂದಿಗೆ ತೇರ್ಗಡೆಯಾದರು. ವಿಜ್ಞಾನದ ಮೂಲತತ್ವಗಳನ್ನು ತಿಳಿಯುವ ಆಸಕ್ತಿ ಅವರ ಮನದಲ್ಲಿ ಆಗಲೇ ಚಿಗುರೊಡೆದಿತ್ತು! **ಡೈನಾಮೋದ ರಹಸ್ಯವೇನು?** ಅದನ್ನು ಹೇಗೆ ಸಿದ್ಧಪಡಿಸಬೇಕು? ಉತ್ಸಾಹಿತರಾದ ಬಾಲಕ ರಾಮನ್ ಅವರು ವಿದ್ಯುತ್ ಉಪಕರಣಗಳ ಪುಸ್ತಕ, ಲೇಖನಗಳನ್ನು ಓದತೊಡಗಿದರು. ಸ್ವಪ್ರಯತ್ನದಿಂದ ಅಧ್ಯಯನ, ಅನ್ವೇಷಣಾ ಪ್ರವೃತ್ತಿಯನ್ನು ಬೆಳೆಸಿಕೊಳ್ಳತೊಡಗಿದರು.


ತಮ್ಮ ೧೩ನೇ ವಯಸ್ಸಿನಲ್ಲಿ ಕಾಲೇಜಿನ ಎಫ್.ಎ. (ಈಗಿನ ಪದವಿಪೂರ್ವ) ಶಿಕ್ಷಣದ ಪರೀಕ್ಷೆಗೆ ಅಭ್ಯಾಸ ಮಾಡಿ ೧೯೦೨ರಲ್ಲಿ **ಪ್ರಥಮದರ್ಜೆಯಲ್ಲಿ ಪಾಸಾದರು.** ಹೆಚ್ಚಿನ ಅಂಕಗಳನ್ನು ಗಳಿಸಿದ್ದಕ್ಕಾಗಿ ಅವರಿಗೆ ವಿದ್ಯಾರ್ಥಿ ವೇತನ ದೊರೆಯಿತು. ಈ ನೆರವಿನಿಂದ ಕಾಲೇಜಿನ ವಿದ್ಯಾಭ್ಯಾಸಕ್ಕಾಗಿ ೧೯೦೩ರಲ್ಲಿ **ಮದರಾಸಿಗೆ ಹೋಗಿ, ಅಲ್ಲಿನ ಪ್ರೆಸಿಡೆನ್ಸಿ ಕಾಲೇಜ್‌ಗೆ** ಸೇರಿದರು.

ಮದರಾಸು ಪ್ರಾಂತದಲ್ಲೇ ಆಗ ಅತಿ ಹೆಸರುವಾಸಿಯಾದ ಕಾಲೇಜು ಅಂದರೆ, ಪ್ರೆಸಿಡೆನ್ಸಿ ಕಾಲೇಜ್. ೧೪ ವರ್ಷದ ಸಣಕಲು ದೇಹದ ರಾಮನ್ ಕಾಲೇಜ್ ವ್ಯಾಸಂಗಕ್ಕೆ ಬಂದಾಗ, ಅಲ್ಲಿನ ಪ್ರಿನ್ಸಿಪಾಲರಿಗೆ, ಅಧ್ಯಾಪಕರಿಗೆ ಪರಮಾಶ್ಚರ್ಯ! **"ನೀನು ನಿಜ ವಾಗಿಯೂ ಕಾಲೇಜ್ ವಿದ್ಯಾರ್ಥಿಯೇ"** ಎಂದು ಚಕಿತರಾಗಿ ಪ್ರಶ್ನಿಸಿದರು. ಚಿಕ್ಕ ವಯಸ್ಸಿನ ಕಾಲೇಜ್ ಮೆಟ್ಟಲೇರಿದ ಇಂತಹ ಬಾಲಕನನ್ನು ಆ ಕಾಲದಲ್ಲಿ ಕಂಡಿರಲಿಲ್ಲ ಎಂಬುದು ಆಗಿನವರಿಗೆ ಆಶ್ಚರ್ಯಕರ ಸಂಗತಿ. ಅಂತೂ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಎರಡು ವರ್ಷಗಳ ಅಭ್ಯಾಸ ಮಾಡಿ, ಬಿ.ಎ. ಪದವಿಯನ್ನು ಗಳಿಸಿದರು. ಆಗ **ಅವರಿಗೆ ೧೬ರ ಹರೆಯ, ಮೊದಲ ದರ್ಜೆಯಲ್ಲಿ ಮೊದಲಿಗರಾಗಿ ಬಂಗಾರದ ಪದಕ ಪಡೆದರು.**

ರಾಮನ್ ಅವರ ಪ್ರತಿಭೆಯನ್ನು ಗುರುತಿಸಿದ ಅವರ ಅಧ್ಯಾಪಕರು, ಉಚ್ಚ ಶಿಕ್ಷಣಕ್ಕಾಗಿ **ಇಂಗ್ಲೆಂಡ್‌ಗೆ ಕಳುಹಿಸಲು ಶಿಫಾರಸು ಮಾಡಿದರು.** ಆದರೆ ಅವರ ದೇಹ ಸ್ಥಿತಿಯನ್ನು ಪರಿಶೀಲಿಸಿದ ವೈದ್ಯರು, ವಿದೇಶದ ಶೀತ ವಾತಾವರಣವು ತೆಳುವಾದ ಅವರ ದೇಹಕ್ಕೆ ಒಗ್ಗದು. ಆ ಕಾರಣಕ್ಕಾಗಿ ಇಂಗ್ಲೆಂಡ್‌ಗೆ ಕಳುಹಿಸುವುದು ಸರಿಯಲ್ಲ ಎಂದು ಅಭಿಪ್ರಾಯ ನೀಡಿದರು. ಇದರಿಂದಾಗಿ ಉನ್ನತ ವಿದ್ಯಾರ್ಜನೆಗಾಗಿ ವಿದೇಶಕ್ಕೆ ತೆರಳುವ ಅವಕಾಶ ತಪ್ಪಿ ಹೋಯಿತು.

**ಪ್ರಶ್ನೆ ೪ :** ರಾಮನ್ ಅವರ ಉನ್ನತ ಅಧ್ಯಯನ ಹೇಗೆ ಸಾಗಿತು? ಅವರ ಮೊದಲ ಅನ್ವೇಷಣೆ ಯಾವುದು? ತಿಳಿಸಿರಿ.

**ಉತ್ತರ :** ಇಂಗ್ಲೆಂಡ್‌ಗೆ ಹೋಗುವ ಅವಕಾಶ ತಪ್ಪಿ ಹೋಗಿದ್ದ ರಿಂದ ರಾಮನ್ ಅಲ್ಲಿಗೆ ಹತಾಶರಾಗಲಿಲ್ಲ. ಎಂ.ಎ. ಪದವಿ ಪಡೆಯಲು ಅದೇ **ಪ್ರೆಸಿಡೆನ್ಸಿ ಕಾಲೇಜಿನಲ್ಲಿ** ವಿದ್ಯಾಭ್ಯಾಸ ಮುಂದು ವರಿಸಿದರು. ತಿಳಿಯುವ-ಕಲಿಯುವ ಆಸಕ್ತಿ ಮತ್ತು ಪ್ರತಿಭೆಯನ್ನು ಗುರುತಿಸಿದ್ದ ಪ್ರೊಫೆಸರ್ ಅವರು ರಾಮನ್ ಅವರಿಗೆ ಇನ್ನಷ್ಟು ವಿಶೇಷವಾಗಿ ಅಭ್ಯಾಸ ಮಾಡಲು **ಪೂರ್ಣ ಸ್ವಾತಂತ್ರ್ಯ ಕಲ್ಪಿಸಿಕೊಟ್ಟರು. ಇದರಿಂದಾಗಿ ದಿವಸದ ಬಹುಭಾಗ ಲೈಬ್ರರಿಯಲ್ಲೇ ಕಳೆಯುತ್ತಿದ್ದರು. ವಾರಕ್ಕೆ ಎರಡು ಬಾರಿ ಸೈಕಲ್ ತುಳಿಯುತ್ತಾ ದೂರದಲ್ಲಿದ್ದ ಕನ್ನೆಮಾರ ಗ್ರಂಥಾಲಯಕ್ಕೆ ಹೋಗಿ, ಅಲ್ಲಿಗೆ ಬರುತ್ತಿದ್ದ ವಿಜ್ಞಾನ ಪತ್ರಿಕೆಗಳಲ್ಲಿನ** ಲೇಖನಗಳನ್ನು ಓದುತ್ತಿದ್ದರು. ತಮಗೆ ಅವಶ್ಯಕವೆನಿಸಿದ ವಿಷಯ ಗಳನ್ನು ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಹೆಸರಾಂತ ವಿಜ್ಞಾನಿ **ಲಾರ್ಡ್‌ರ್‍ಯಾಲೆ** ಅವರ ಲೇಖನಗಳು ಅವರ ಗಮನ ಸೆಳೆದವು. ಬಿಟ್ಟೂ ಬಿಡದೆ ಅವನ್ನು ಓದಿದರು. ಹೆಚ್ಚಿನ ತಿಳುವಳಿಕೆಗಾಗಿ



**ಅವರ ತಾಯಿಯ ತವರೂರು ತಿರುವಾನೈಕ್ಕಾವಲ್‌ನಲ್ಲಿ ರಾಮನ್ ಹುಟ್ಟಿದ ಮನೆ**

ಅಂತಹ ಮೇಧಾವಿಯೊಂದಿಗೆ ಪತ್ರ ವ್ಯವಹಾರವನ್ನು ನಡೆಸಿದ್ದ ರೆಂಬುದು ಆಗಿನ ಮಟ್ಟಕ್ಕೆ ಅದು ಹೆಗ್ಗಳಿಕೆ ವಿಷಯವೇ. ವಿದ್ಯಾರ್ಥಿ ಗಳು ಪಠ್ಯಗಳಿಗಷ್ಟೇ ಸೀಮಿತರಾಗದೇ, ಇತರ **ಜ್ಞಾನಾಸಕ್ತಿಯ ವಿಷಯ ಗಳನ್ನು ಇಲ್ಲವೆ ತಮಗಿಷ್ಟವಾದ ವಿಷಯಗಳನ್ನು ಆಯ್ಕೆ ಮಾಡಿ ಕೊಂಡು ಅಭ್ಯಾಸದಲ್ಲಿ ತೊಡಗಿಸಿಕೊಳ್ಳಬೇಕು.** ರಾಮನ್ ಅವರ ಅಧ್ಯಯನ ವಿಧಾನವು ಈ ದಿಸೆಯಲ್ಲಿ ಮಾದರಿಯಾದುದು.

**ಪ್ರೆಸಿಡೆನ್ಸಿ ಕಾಲೇಜಿನಲ್ಲಿದ್ದ ನಾಲ್ಕು ವರ್ಷವೂ ಸ್ವತಂತ್ರವಾಗಿ ಜ್ಞಾನಾರ್ಜನೆಯಲ್ಲಿ ತೊಡಗಿದ್ದರು.** ಪ್ರೊಫೆಸರರಿಂದ ನೇರವಾಗಿ ಪಡೆದ ಜ್ಞಾನ ಇಲ್ಲಿ ಅಲ್ಲವೆ! ಓದಿಕೊಂಡ ವಿಷಯಗಳನ್ನು ಒರೆಹಚ್ಚಿ ನೋಡಲು ತಾವೇ ಪ್ರಯೋಗಗಳನ್ನು ಮಾಡುತ್ತಿದ್ದರು. ಹೀಗೆ ಮಾಡುವ ಪ್ರಯೋಗಗಳಿಗೆ ಯಾವುದೇ ಅಡ್ಡಿ ಆತಂಕಗಳೂ ಇರಲಿಲ್ಲ. **ಎಂ.ಎ. ಪದವಿಗಾಗಿ ಅವರು ಕಾಲೇಜಿನಲ್ಲಿ ಕಳೆದ ಎರಡು ವರ್ಷಗಳಲ್ಲಿ ಪಾಠ ಕೇಳಲು ಹೋದದ್ದು ಒಂದು ದಿನ ಮಾತ್ರವೇ ಅಂತೆ!** ಹೀಗೆ ಯಾರೊಬ್ಬರ ಸಹಾಯವಿಲ್ಲದೆ ಪ್ರೊಫೆಸರರ ಮಾರ್ಗದರ್ಶನವೂ ಇಲ್ಲದೆ ತಾವು ಕೈಗೊಂಡ ಪ್ರಯೋಗಗಳಿಂದ ಫಲಿತವಾದುದನ್ನು ಸಂಶೋಧನಾ ಲೇಖನವನ್ನಾಗಿ ಸಿದ್ಧಪಡಿಸಿ ಇಂಗ್ಲೆಂಡಿನ ಪ್ರತಿಷ್ಠಿತ ವಿಜ್ಞಾನ ಪತ್ರಿಕೆ 'ಫಿಲಸಾಫಿಕಲ್ ಮಾಗಜಿನ್'ಗೆ ಕಳುಹಿಸಿದರು. **೧೮ ವರ್ಷದ ಎಂ.ಎ. ವಿದ್ಯಾರ್ಥಿಯಾದ ರಾಮನ್ ಅವರ ಈ ಲೇಖನವು ೧೯೦೬ರ ನವೆಂಬರ್ ಸಂಚಿಕೆಯಲ್ಲಿ 'ಪಟ್ಟಕದ ಮೇಲೆ ಓರೆಯಾಗಿ ಬಿದ್ದ ಆಯ್ದ ಸೀಳು ರಂಧ್ರ ಬೆಳಕು ಪ್ರತಿಫಲನ ವಾದಾಗ ಉಂಟಾಗುವ ಅಸಮ ವಿವರ್ತನಾ ಪಟ್ಟಿಗಳು'** (Unsymmetrical Diffraction bands due to a rectangular aperture observed when light is reflected very obliquely at the face of a prism) ಎಂಬ ಶೀರ್ಷಿಕೆಯೊಂದಿಗೆ ಪ್ರಕಟವಾಯಿತು. **ಇದು ಅವರ ಸ್ವಂತ ಪರಿಶ್ರಮದ, ಅನ್ವೇಷಣೆಯ ಮೊದಲ ಲೇಖನ.** ಇದರ ನಂತರ ಸ್ವಲ್ಪ ಕಾಲದಲ್ಲಿ 'ದ್ರವಗಳಲ್ಲಿನ ಮೇಲ್ಮೈ ಬಲವನ್ನು ಅಳತೆ ಮಾಡುವ ಒಂದು ಹೊಸ ವಿಧಾನ' ಎಂಬ ಮತ್ತೊಂದು ಲೇಖನ ಅದೇ ಮ್ಯಾಗಜಿನ್‌ನಲ್ಲಿ ಪ್ರಕಟವಾಯಿತು. ಹೀಗೆ ರಾಮನ್

**(ಪುಟ ೩೩ಕ್ಕೆ)**

(ಪುಟ ೧೩ ರಿಂದ)... **ಪ್ರಶ್ನೋತ್ತರಗಳಲ್ಲಿ ಸರ್ ಸಿ.ವಿ. ರಾಮನ್**

ಅವರ ವೈಯಕ್ತಿಕ ಸಂಶೋಧನೆ ಮತ್ತು ಬರವಣಿಗೆಯು ಎಂ.ಎ. ಅಧ್ಯಯನದ ಜೊತೆಗೆ ಮುಂದುವರೆಯಿತು.

**೧೯೦೭ರ ಜನವರಿಯಲ್ಲಿ ಎಂ.ಎ. ಪದವಿಯ ಪರೀಕ್ಷೆಯನ್ನು** ಮೊದಲ ದರ್ಜೆಯಲ್ಲಿ ಮೊದಲ ರ್‍ಯಾಂಕಿನೊಂದಿಗೆ ಪಾಸಾದರು. ಕಾಲೇಜಿನಲ್ಲಿ ಕಳೆದ ವರ್ಷಗಳನ್ನು ನೆನೆಸಿಕೊಳ್ಳುತ್ತಾ ರಾಮನ್ ಅವರು, "ಪ್ರತಿ ನಿಮಿಷವನ್ನು ಜ್ಞಾನ ಹೆಚ್ಚಿಸಿಕೊಳ್ಳುವುದರಲ್ಲಿ ಕಳೆದೆ. ಅದರಿಂದ ಅದ್ಭುತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಯಿತು. ಎರಡು ವರ್ಷಗಳಲ್ಲಿ ಪ್ರೌಢ ಗಣಿತ, ಭೌತ, ರಸಾಯನಶಾಸ್ತ್ರಗಳನ್ನು ಕಲಿತೆ. ಇವುಗಳು ಅಲ್ಲದೆ, ಅರ್ಥಶಾಸ್ತ್ರ, ರಾಜನೀತಿಶಾಸ್ತ್ರ, ತರ್ಕಶಾಸ್ತ್ರಗಳನ್ನು ಕಲಿತೆ. ಇಂಗ್ಲೆಂಡ್ ಚರಿತ್ರೆ, ಭಾರತ ಚರಿತ್ರೆಯನ್ನು ತಿಳಿದುಕೊಂಡೆ. ಇಂಗ್ಲಿಷ್ ಭಾಷಾ ಸಾಹಿತ್ಯದ ಪರಿಚಯ ಮಾಡಿಕೊಂಡೆ. ಪ್ರಸಿದ್ಧ ಲೇಖಕರ ಬರಹಗಳು ನನ್ನ ಪರಿಚಯಕ್ಕೆ ಬಂದವು. **ನನಗೆ ಹೇಳಿಕೊಡುವವರು ಯಾರು ಇರಲಿಲ್ಲ. ಎಲ್ಲವನ್ನೂ ನಾನೇ ಸ್ವಂತವಾಗಿ ಅಭ್ಯಾಸಮಾಡಿ ತಿಳಿದುಕೊಳ್ಳಬೇಕಾಯಿತು. ಕಷ್ಟಪಟ್ಟು ಕಲಿಯಬೇಕಾಯಿತು.** ಕಲಿತದ್ದು ಒಂದೇ ಅಲ್ಲ, ವಿಶ್ವವಿದ್ಯಾಲಯ ನಡೆಸುವ ಪರೀಕ್ಷೆಗೆ ಕುಳಿತು ತೇರ್ಗಡೆ ಹೊಂದುವ ಶಕ್ತಿಯನ್ನು ಸಂಪಾದಿಸಬೇಕಾಗಿತ್ತು" ಎಂದು ಹೇಳಿಕೊಂಡಿದ್ದಾರೆ.



ಪ್ರೆಸಿಡೆನ್ಸಿ ಕಾಲೇಜಿನ ಸಹಪಾಠಿಗಳೊಂದಿಗೆ ರಾಮನ್ ಬಲತುದಿಯಲ್ಲಿ

**ಪ್ರಶ್ನೆ ೩ :** ವಿದ್ಯಾರ್ಥಿಯಾಗಿದ್ದಾಗ ರಾಮನ್ ಅವರ ಮೇಲೆ ತೀವ್ರ ಪ್ರಭಾವ ಬೀರಿದ ಅಂಶಗಳು ಯಾವುವು - ವಿವರಿಸಿರಿ.

**ಉತ್ತರ :** ರಾಮನ್ ಅವರು ಉನ್ನತ ವ್ಯಾಸಂಗದ ವಿದ್ಯಾರ್ಥಿಯಾಗಿದ್ದಾಗ, ಸ್ವತಂತ್ರವಾಗಿ ಶೋಧನೆ ಪ್ರಯೋಗಗಳಲ್ಲಿ ತೊಡಗಿಸಿಕೊಂಡಿದ್ದ ಆ ದಿನಗಳಲ್ಲಿ ಅವರ ಬದುಕಿನ ಮೇಲೆ ಪ್ರಸಿದ್ಧ ವಿಜ್ಞಾನಿಗಳಾದ **ಲಾರ್ಡ್ ರ್‍ಯಾಲೇ** (Lord Rayleigh), **ಹೆಲ್ಮ್‌ಹೋಲ್ಟ್ಸ್** (Helmholtz), ಲೇಖಕರಾದ **ಎಡ್ವಿನ್ ಆರ್ನಾಲ್ಡ್, ಯೂಕ್ಲಿಡ್** ಅವರ ಚಿಂತನೆಗಳು ಗಾಢವಾಗಿ ಪ್ರಭಾವ ಬೀರಿದವು. ಲಾರ್ಡ್ ರ್‍ಯಾಲೇ ಮತ್ತು ಹೆಲ್ಮ್‌ಹೋಲ್ಟ್ಸ್ ಅವರ ಹಲವಾರು ಲೇಖನಗಳನ್ನು ಓದಿ, ಪ್ರೇರಿತರಾಗಿ ಅವರೊಂದಿಗೆ ಪತ್ರ ಸಂಪರ್ಕವನ್ನು ಸಾಧಿಸಿಕೊಂಡಿದ್ದರು.

ವಿಜ್ಞಾನಿ ಹೆರ್‌ಮೆನ್ ವಾನ್ ಹೆಲ್ಮ್ ಹೋಲ್ಟ್ಸ್ ಅವರ ಬಗ್ಗೆ ರಾಮನ್ ಅವರಿಗೆ ಅಪಾರ ಗೌರವ. ಶಬ್ದದ ಬಗ್ಗೆ ಹೋಲ್ಟ್ಸ್ ಬರೆದ **ಸೆನ್‌ಶೇಷನ್ ಆಫ್ ಟೋನ್** (Sensation of Tone) ಎಂಬ ಪುಸ್ತಕವನ್ನು ಓದಿಕೊಂಡಿದ್ದ ರಾಮನ್, ಅದನ್ನು ಬಹಳ ಮೆಚ್ಚಿಕೊಂಡಿದ್ದರು. **ಎಡ್ವಿನ್ ಆರ್ನಾಲ್ಡ್** ಅವರು ಬರೆದ **'Light of Asia'** (ಬುದ್ಧನ ಕತೆ) ಗ್ರಂಥವನ್ನು ಓದಿದರು. ರಾಮನ್ ಅವರ ಬದುಕಿನ ಮೇಲೆ ಬುದ್ಧನ ಜೀವನ ವಿಶೇಷವಾಗಿ ಪ್ರಭಾವ ಬೀರಿತು. **ಯೂಕ್ಲಿಡ್**‌ನ ಜ್ಯಾಮಿತಿಯ ಪ್ರಮೇಯಗಳನ್ನು ರಾಮನ್ ಮೆಚ್ಚಿಕೊಂಡಿದ್ದರು. ತಮ್ಮ ಸುತ್ತಲಿನ ಪ್ರಕೃತಿ ವ್ಯಾಪಾರಗಳೆಲ್ಲದರಲ್ಲೂ ಜ್ಯಾಮಿತಿಯ ಕೈವಾಡವಿದೆಯೆಂಬುದನ್ನು ಕಂಡುಕೊಂಡಿದ್ದರು.

ತಾರುಣ್ಯದಲ್ಲಿನ ಅವರ ಓದಿನ ಗೀಳು, ಗೂಢವಾದ ಸತ್ಯಾಸತ್ಯತೆಗಳನ್ನು ಅರಿಯುವ ಜ್ಞಾನದ ಹಸಿವು ಸ್ಪಷ್ಟವಾಗಿ ಮುಂದಿನ ಅವರ ದಾರಿ ಯಾವುದೆಂಬುದನ್ನು ತೋರಿಸಿಕೊಟ್ಟಿತ್ತು ಕುತೂಹಲಕರವಾದುದನ್ನು ಅರಿತುಕೊಳ್ಳುವ ತವಕ ಹೆಚ್ಚಾಗುತ್ತಾ ಹೋಯಿತು. ವಂಶಪಾರಂಪರ್ಯವಾಗಿ ಬಂದಿದ್ದ ಸಂಗೀತದ ಮೇಲಿನ ಅಭಿರುಚಿಯಿಂದಾಗಿ ವೈಜ್ಞಾನಿಕವಾಗಿ ಅದರ ಸಂಬಂಧಗಳನ್ನು ಹುಡುಕತೊಡಗಿದರು. ಇದರ ಪ್ರತಿಫಲವೇ "ಭಾರತದ ತಂತಿ ವಾದ್ಯಗಳಿಂದಲೂ, ಮೃದಂಗದಿಂದಲೂ ಹೊರಡುವ ನಾದ ತರಂಗಗಳ ಭೌತಶಾಸ್ತ್ರೀಯ ವಿಶ್ಲೇಷಣೆ' ಎಂಬ ಪ್ರಬಂಧಗಳು. ಇವು **'ನೇಚರ್', 'ಫಿಲಸಾಫಿಕಲ್ ಮ್ಯಾಗಜಿನ್'** ಹಾಗೂ **'ಫಿಸಿಕಲ್ ರಿವ್ಯೂವ್'** ಪ್ರಸಿದ್ಧ ನಿಯತಕಾಲಿಕೆಗಳಲ್ಲಿ ಪ್ರಕಟವಾದವು.

ಹೆಲ್ಮ್‌ಹೋಲ್ಟ್ಸ್ ಅವರ **'ಸೆನ್‌ಶೇಷನ್ ಆಫ್ ಟೋನ್'** ಪುಸ್ತಕದ ಬಗ್ಗೆ ಮೆಚ್ಚಿಕೆ ವ್ಯಕ್ತಪಡಿಸುತ್ತಾ "ಈ ಪುಸ್ತಕವು ನನ್ನ ಮೇಲೆ ವಿಶೇಷ ಪರಿಣಾಮ ಉಂಟುಮಾಡಿದೆ. ಮೊದಲನೆಯ ಬಾರಿಗೆ ವೈಜ್ಞಾನಿಕ ಪರಿಶೋಧನೆ ಎಂದರೇನು? ಅದರಲ್ಲಿ ತೊಡಗುವುದು ಹೇಗೆ? ಎನ್ನುವುದನ್ನು ಮನಗಂಡೆ. ಎಷ್ಟೋ ಸಮಸ್ಯೆಗಳು ನನಗೆ ಗೋಚರವಾದವು. ಇವೇ ಮುಂದೆ ನನ್ನ ಗಮನವನ್ನು ಸೆರೆಹಿಡಿದು ಅನ್ವೇಷಣೆಯಲ್ಲಿ ತೊಡಗುವಂತೆ ಮಾಡಿದವು" ಎಂದು ಮನಬಿಚ್ಚಿ ಹೇಳಿಕೊಂಡಿದ್ದಾರೆ. ತಮ್ಮ ಯೌವ್ವನದ ಕಾಲವನ್ನು ಜ್ಞಾನಾರ್ಜನೆಗಾಗಿ ಸದುಪಯೋಗಪಡಿಸಿಕೊಂಡ ವಿರಳ ವ್ಯಕ್ತಿಗಳಲ್ಲಿ ಅವರು ಅಪರೂಪದ ವ್ಯಕ್ತಿ. ಅಸಾಧಾರಣ ವ್ಯಕ್ತಿಯಾಗಿ ಬೆಳೆಯಬೇಕಾದವನಿಗೆ ಸತತವಾದ ಪ್ರಯತ್ನ, ಕಾರ್ಯನಿಷ್ಠೆ ಎಷ್ಟು ಅವಶ್ಯಕ ಎನ್ನುವುದಕ್ಕೆ ರಾಮನ್ ಅವರ ಬಾಲ್ಯಜೀವನ ಅತ್ಯುತ್ತಮವಾದ ನಿದರ್ಶನ.

**ಮುಂದುವರಿಯುವುದು...**

[**ಗ್ರಂಥಗಳ ನೆರವು :** ೧. ವಿಖ್ಯಾತ-ವಿಜ್ಞಾನಿ ರಾಮನ್ (ಜೀವನ-ಸಾಧನೆ-ಹಂಪ ನಾಗರಾಜಯ್ಯ, ೧೯೬೮; ೨. ರಾಮನ್ (ಚಂದ್ರಶೇಖರ ವೆಂಕಟರಾಮನ್ ಅವರ ಜೀವನ ಚಿತ್ರ) - ಬಿ.ಪಿ. ರಾಧಾಕೃಷ್ಣ, ೧೯೮೯; ೩. ಸರ್ ಸಿ.ವಿ. ರಾಮನ್ - ಪ್ರೊ. ಎಸ್.ವಿ. ಸುಬ್ರಹ್ಮಣ್ಯಂ, ೨೦೦೯.]

# ಪ್ರಶ್ನೋತ್ತರಗಳಲ್ಲಿ ಸರ್ ಸಿ.ವಿ. ರಾಮನ್-೨

◆ ಸಂಯೋಜನೆ : ಜೈನುಲ್ಲಾ ಬಳ್ಳಾರಿ

**ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ**

**ಪ್ರಶ್ನೆ ೬ :** ಎಂ.ಎ. ಪದವಿಯ ನಂತರ ರಾಮನ್ ಅವರ ಮುಂದಿದ್ದ ಆಯ್ಕೆಗಳಾವುವು?

**ಉತ್ತರ :** ಎಂ.ಎ. ಪದವಿಯ ನಂತರ ರಾಮನ್ ಅವರ ಮುಂದೆ ಮೂರು ಆಯ್ಕೆಗಳಿದ್ದವು ೧. ಬದುಕಿಗೊಂದು ಉದ್ಯೋಗ ದಾಸರೆ, ೨. ಮದುವೆ ಹಾಗೂ ೩. ಸಂಶೋಧನೆಯ ಮುಂದು ವರಿಕೆ.

ವಿದ್ಯಾರ್ಥಿ ಜೀವನದಿಂದಲೂ ವಿಜ್ಞಾನ ಕಡೆಗೆ ಅವರಿಗೆ ಹೆಚ್ಚಿನ ಒಲವು, ಆಸಕ್ತಿ, ಕಾಳಜಿಯಿದ್ದುದಂತೂ ಸರಿ. ಸ್ವಪ್ರಯತ್ನ, ಸತತವಾದ ಜಿಜ್ಞಾಸೆಯ ದೆಸೆಯಿಂದ ಆ ಕ್ಷೇತ್ರದಲ್ಲಿ ತಮ್ಮದೇ ಆದ ಮಾರ್ಗವನ್ನು ನಿರ್ಮಿಸಬೇಕೆಂಬ ತುಡಿತ ಬೆಳೆಯುತ್ತಾ ಹೋಯಿತು. ಆದರೆ, ಅಷ್ಟರಿಂದಲೇ ಬದುಕಿನ ಬಂಡಿ ಮುಂದೆ ಹೇಗೆ ಸಾಗೀತು? ಏನಾದರೊಂದು ಉದ್ಯೋಗವನ್ನು ಹುಡುಕಿ ಕೊಳ್ಳಬೇಕಲ್ಲವೇ? ಹೀಗಾಗಿ, ಎಂ.ಎ. ಉತ್ತೀರ್ಣರಾದ ಬಳಿಕ ಅವರ ಧ್ಯಾನ ಉದ್ಯೋಗ ಪಡೆಯುವ ಕಡೆಗೆ ಸಾಗಿತು.

ಆ ಕಾಲದ ಪ್ರತಿಭಾವಂತ ವಿದ್ಯಾರ್ಥಿ ಯುವಕರು ತಮ್ಮ ಭವಿಷ್ಯ ಜೀವನದ ಬಗ್ಗೆ ಹಲವು ಕನಸುಗಳನ್ನು ಕಟ್ಟಿಕೊಳ್ಳುತ್ತಿದ್ದುದು ಸಾಮಾನ್ಯ. ಅವರ ಮುಂದೆ ಎರಡು ಆಯ್ಕೆಗಳಿದ್ದವು; ಒಂದು - ಉನ್ನತ ವ್ಯಾಸಂಗ ಮುಂದುವರಿಸುವುದು, ಎರಡು -ವೃತ್ತಿಜೀವನಕ್ಕೆ ಸಂಬಂಧಿಸಿದ ಪ್ರತಿಷ್ಠಿತ ಸರ್ಕಾರಿ ಹುದ್ದೆಯ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಅದರಲ್ಲಿ ತೇರ್ಗಡೆಯಾಗುವುದಕ್ಕೆ ಸಿದ್ಧತೆ ಮಾಡಿಕೊಳ್ಳುವುದು. ಹೀಗಾಗಿ ರಾಮನ್ ಅವರು ಉದ್ಯೋಗ ಪಡೆಯುವ ಕಡೆಗೆ ಆಸಕ್ತಿ ವಹಿಸಿದರು.

ಬ್ರಿಟೀಷ್ ಆಡಳಿತದ ಕಾಲದಲ್ಲಿ ಸರ್ಕಾರದ ಉನ್ನತ ಸೇವೆಗೆ ಸೇರಬೇಕೆಂದರೆ ಉನ್ನತ ಮಟ್ಟದ **ಇಂಡಿಯನ್ ಸಿವಿಲ್ ಸರ್ವಿಸ್** (ಐಸಿಎಸ್) ಹಾಗೂ **ಫೈನಾನ್ಸಿಯಲ್ ಸಿವಿಲ್ ಸರ್ವಿಸ್** (ಎಫ್‌ಸಿಎಸ್) ಎಂಬ ಪರೀಕ್ಷೆಗಳನ್ನು ಉತ್ತೀರ್ಣರಾಗಬೇಕಾಗಿತ್ತು. ವೃತ್ತಿ ವ್ಯಾಸಂಗ ಕ್ಕಾಗಿ ಐಸಿಎಸ್ (ಈಗಿನ ಐಎಎಸ್) ಪರೀಕ್ಷೆ ಮತ್ತು ಆಡಳಿತ ಕುರಿತ ತರಬೇತಿಗಾಗಿ ಇಂಗ್ಲೆಂಡಿಗೆ ಹೋಗಬೇಕಾಗುತ್ತಿತ್ತು. ಈ ವೃತ್ತಿ ಅಧ್ಯಯನಕ್ಕೆ ತೆರಳಲು ರಾಮನ್ ಅವರಿಗೆ ಕಾಲೇಜಿನ ಅಧ್ಯಾಪಕ ವರ್ಗದವರ ಶಿಫಾರಸು ಮತ್ತು ಪ್ರೋತ್ಸಾಹ ಇದ್ದಿತಾದರೂ ಇವರ ಆರೋಗ್ಯ ಸ್ಥಿತಿ ಅಲ್ಲಿನ ಪರಿಸ್ಥಿತಿಗೆ ಹೊಂದಿಕೊಳ್ಳಲು ಆಗುವುದಿಲ್ಲ ಎಂಬ ವೈದ್ಯಕೀಯ ಕಾರಣಗಳನ್ನು ನೀಡಿ, ವಿದೇಶಕ್ಕೆ ಹೋಗಲು ಈ ಹಿಂದೆಯೇ ನಿರಾಕರಿಸಲಾಗಿತ್ತು. ಅವಕಾಶ ಕೈತಪ್ಪಿ ಹೋಯಿತೆಂದು ರಾಮನ್ ಅವರು ಕೈಕಟ್ಟಿ ಕೂರಲಿಲ್ಲ. ೧೯೦೭ರಲ್ಲಿ **ಫೈನಾನ್ಸಿಯಲ್ ಸಿವಿಲ್ ಸರ್ವಿಸ್** (ಎಫ್‌ಸಿಎಸ್) ಪರೀಕ್ಷೆಗೆ ಕುಳಿತು ಮೊದಲಿಗರಾಗಿ ಉತ್ತೀರ್ಣರಾದರು. ಹೀಗೆ ವೃತ್ತಿಜೀವನದ ಬಾಗಿಲು ತೆರೆಯಿತು. ಬ್ರಿಟೀಷ್ ಸರ್ಕಾರದ ಲೆಕ್ಕಪರಿಶೋಧನಾ ವಿಭಾಗಕ್ಕೆ ಸರ್ಕಾರಿ ಲೆಕ್ಕಪತ್ರ ಅಧಿಕಾರಿಯಾಗಿ ನೇಮಕರಾದರು.

**ಪ್ರಶ್ನೆ ೭ :** ರಾಮನ್ ಅವರ ವೈವಾಹಿಕ ಜೀವನದ ಬಗ್ಗೆ ವಿವರ ವಾಗಿ ತಿಳಿಸಿರಿ?

**ಉತ್ತರ :** ಯವ್ವನದಲ್ಲಿ ಯುವಕರಿಗೆ ಅದಮ್ಯ ಉತ್ಸಾಹ, ಆಸಕ್ತಿ ಹಾಗೂ ಕನಸುಗಳಿರುತ್ತವೆ. ಅವರನ್ನು ವಿಶೇಷವಾಗಿ ಆಕರ್ಷಿತರನ್ನಾಗಿಸುವ ಸಂಬಂಧವೆಂದರೆ ವಿವಾಹ. ಈ ಹೊಸ ಸಂಬಂಧ ಮೂಲಕ ಓರ್ವ ಬಾಳಸಂಗಾತಿ ಯನ್ನು ಜನುಮದ ಜೋಡಿಯಾಗಿ ಪಡೆಯುತ್ತಾರೆ. ಕೆಲವರಿಗೆ ಅದು ಭಾಗ್ಯದ ಬಾಗಿಲು, ಬದುಕಿನ ಪ್ರಮುಖ ಘಟನೆ. ರಾಮನ್ ಅವರ ಬದುಕಿನಲ್ಲೂ ಇಂತಹ ತಿರುವೊಂದು ಬಂದಿತು.

೧೯೦೭ರಲ್ಲಿ ಎಫ್.ಸಿ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣ ರಾಗಿ, ಬ್ರಿಟೀಷ್ ಸರ್ಕಾರದ **ಅಸಿಸ್ಟೆಂಟ್ ಅಕೌಂಟೆಂಟ್ ಜನರಲ್** (ಎಎಜಿ)ರಾಗಿ ಸಿ.ವಿ. ರಾಮನ್ ನೇಮಕರಾದರು. ಆಗ ಅವರ ವಯಸ್ಸು ೧೯ ವರ್ಷ, ಪುಟಿಯುವ ಉತ್ಸಾಹದ ಕಾರಂಜಿ. ಈ ಸರಿಹೊತ್ತಿನಲ್ಲಿ ಅವರಿಗೆ ಮದುವೆಯ ಕಂಕಣಭಾಗ್ಯ ಕೂಡಿ ಬಂದಿತು. **ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನ** ವಿದ್ಯಾರ್ಥಿಯಾಗಿದ್ದಾಗ ಸಿ.ವಿ.ರಾಮನ್ ಅವರಿಗೆ **ರಾಮಸ್ವಾಮಿ ಶಿವನ್** ಅವರೊಡನೆ ಸ್ನೇಹ ಬೆಳೆಯಿತು. ರಾಮಸ್ವಾಮಿ ಶಿವನ್‌ಗೆ ತಂಗಿಯೊಬ್ಬಳು ಇದ್ದಳು. ಆಕೆಯ ಹೆಸರು **ಲೋಕಸುಂದರಿ**. ಇವರ ತಂದೆಯ ಹೆಸರು **ಕೃಷ್ಣಸ್ವಾಮಿ ಅಯ್ಯರ್**, ಮದರಾಸಿನ ಕಸ್ಟಮ್ಸ್ ಇಲಾಖೆಯ ಅಧಿಕಾರಿಯಾಗಿದ್ದರು.

ರಾಮನ್ ಅವರು ಆಗಾಗ್ಗೆ ಗೆಳೆಯ ರಾಮಸ್ವಾಮಿ ಶಿವನ್ ಅವರ ಮನೆಗೆ ಹೋಗಿಬರುವ ಪರಿಪಾಠ ಇಟ್ಟುಕೊಂಡಿದ್ದರು. ಹೀಗೊಮ್ಮೆ ಹೋದಾಗ, ಲೋಕಸುಂದರಿ ಅವರು ಅವರ ಕಣ್ಣಿಗೆ ಕಂಡರು. ಲೋಕಸುಂದರಿ ವೀಣೆ ನುಡಿಸುವುದರಲ್ಲಿ ಪ್ರವೀಣೆ. ವೀಣೆಯೊಂದಿಗೆ ಹಾಡುತ್ತಿದ್ದ ಸಂದರ್ಭದಲ್ಲಿ ಅವರ ವೀಣಾ ವಾದನಕ್ಕೆ ಮತ್ತು ಕಂಠಸಿರಿಗೆ ಯುವಕ ರಾಮನ್ ಮಾರುಹೋದರು. ಲೋಕಸುಂದರಿಯನ್ನು ಬಾಳಿನ ಸಂಗಾತಿಯಾಗಿ ಮಾಡಿಕೊಳ್ಳಲು


ನಿಶ್ಚಯಿಸಿದರು. ತಂದೆ, ತಾಯಿ, ಬಂಧುಗಳು ಕನ್ಯೆಯ ಮನೆಗೆ ನೋಡಲು ಹೋದರು. ಎರಡು ಕುಟುಂಬಗಳ ನಡುವೆ ಕುಲಗೋತ್ರ, ಒಳಪಂಗಡಗಳ ವಿಚಾರದಲ್ಲಿ ಕೊಡು-ಕೊಳ್ಳುವ ಸಂಪ್ರದಾಯ ಇಲ್ಲದಾಗ್ಯೂ, ಸ್ವಲ್ಪ ತಕರಾರು ಉಂಟಾದರೂ ಇಂತಹ ಒಳಸಂಬಂಧಗಳ ಕಟ್ಟುಪಾಡುಗಳನ್ನು ಲೆಕ್ಕಿಸದೆ, ಲೋಕಸುಂದರಿ ಯವರನ್ನೇ ಮದುವೆಯಾಗುವುದಾಗಿ ರಾಮನ್ ಹಿರಿಯರ ಮೇಲೆ ಒತ್ತಡ ಹೇರಿದರು. ಇವರ ಪ್ರಯತ್ನ ಫಲ ನೀಡಿತು-ಲೋಕಸುಂದರಿ ಯನ್ನು ರಾಮನ್ ಅವರ ಕುಟುಂಬದ ಸದಸ್ಯರಲ್ಲೊಬ್ಬರನ್ನಾಗಿ, ಸೊಸೆಯನ್ನಾಗಿ ಮಾಡಿಕೊಳ್ಳುವುದಕ್ಕೆ ಒಪ್ಪಿಗೆ ದೊರೆಯಿತು. **೧೯೦೭ರಲ್ಲಿ ರಾಮನ್ ಮತ್ತು ಲೋಕಸುಂದರಿ ಅವರ ವಿವಾಹವು ಮದರಾಸಿನಲ್ಲಿ ಸಾಂಪ್ರದಾಯಿಕವಾಗಿ ನೆರವೇರಿತು.** ರಾಮನ್ ಅವರ ವಯಸ್ಸು ಆಗ ೧೯ ವರ್ಷ, ಲೋಕ ಸುಂದರಿಯವರ ವಯಸ್ಸು ೧೩ ವರ್ಷ. ಕನ್ಯಾದಾತರು ವರದಕ್ಷಿಣೆ ಕೊಡಲು ಬಂದಾಗ ರಾಮನ್ ಅವರು ಇದನ್ನು ಒಪ್ಪದೇ ನಿರಾಕರಿಸಿದರಂತೆ!

ಮದುವೆ, ರಾಮನ್ ಅವರ ಬದುಕಿನ ಒಂದು ಅವಿಸ್ಮರಣೀಯ ಪ್ರಮುಖ ಘಟನೆ. ರಾಮನ್ ಅವರು ಲೋಕ ಕಲ್ಯಾಣಕ್ಕೆ, ವಿಜ್ಞಾನ ಕ್ಷೇತ್ರಕ್ಕೆ ತಮ್ಮ ಸಂಶೋಧನೆಗಳ ಮೂಲಕ ಮಹತ್ವದ ಕೊಡುಗೆಗಳನ್ನು ನೀಡಲು ಸ್ಫೂರ್ತಿಯಾಯಿತು. ರಾಮನ್ ಮತ್ತು ಲೋಕಸುಂದರಿ ಯವರ ದಾಂಪತ್ಯ ಜೀವನ ಆದರ್ಶದ ಪ್ರತೀಕವಾಗಿತ್ತು. ಈ ದಂಪತಿಗಳ ನಡೆ-ನುಡಿ ಸಂಬಂಧಗಳನ್ನು ಹತ್ತಿರದಿಂದ ಕಂಡವರು ತುಂಬುಮನದಿಂದ ಸ್ಮರಿಸಿದ್ದಾರೆ, ಸಂತೋಷಪಟ್ಟಿದ್ದಾರೆ, ಹಾರೈಸಿದ್ದಾರೆ. ಲೋಕಸುಂದರಿ ಅವರು ಬುದ್ಧಿವಂತೆ, ಬಹುಭಾಷಾ ಪ್ರವೀಣೆ, ಸಂಗೀತದ ಆರಾಧಕಿ, ವೀಣಾವಾದಕಿ, ಬುದ್ಧಿವಂತಿಕೆಯಲ್ಲಿ ರಾಮನ್ ಅವರಿಗೆ ತಕ್ಕ ಜೀವನ ಸಂಗಾತಿ. ಪ್ರತಿಭಾವಂತ ವಿಜ್ಞಾನಿಯಾದ ಗಂಡನ ಸ್ವಭಾವವನ್ನು ಅರ್ಥಮಾಡಿಕೊಂಡು, ಅವರ ನಡೆನುಡಿಗಳೊಡನೆ ಬೆಸೆದುಕೊಂಡು ಹೋಗುವ ಗುಣ ಸ್ವಭಾವದವರು.


ರಾಮನ್ ಅವರ ಸಂಶೋಧನಾ ಚಟುವಟಿಕೆಗಳು ನಿರಂತರವಾಗಿ ಮುಂದುವರಿಯಬೇಕು; ಯಾವುದೇ ಅಡ್ಡಿ-ಆತಂಕಗಳು ತೊಡಕಾಗಕೂಡದು ಎಂಬುದನ್ನು ಬಹುಬೇಗ ಅರಿತುಕೊಂಡಿದ್ದು ಮಾತ್ರವಲ್ಲ, ಪೂರಕವಾಗಿ ತಮ್ಮ ಜೀವನಕ್ರಮವನ್ನು ರೂಪಿಸಿಕೊಂಡರು. "ತಮ್ಮ ವೈಯಕ್ತಿಕ ವಿಷಯಗಳನ್ನು ಬದಿಗೊತ್ತಿ, ಗಂಡನ ಯೋಗಕ್ಷೇಮವೇ ತಮ್ಮ ಮುಖ್ಯ ಕರ್ತವ್ಯವೆಂದು ತಿಳಿದು, ರಾಮನ್ ಅವರು ಹೋದೆಲ್ಲೆಲ್ಲ ಹೋಗಿ, ನೆರಳಿನಂತೆ ಹಿಂಬಾಲಿಸಿ ಕಾಲ ಕಾಲಕ್ಕೆ ಉಟೋಪಚಾರಗಳನ್ನು ಮಾಡಿ, ಮನಸ್ಸು ಖಿನ್ನವಾದಾಗ ಅದನ್ನು ಗೆಲುವಿನಿಂದ ತುಂಬಿ, ಕೆಲಸದಲ್ಲಿ ಉತ್ತೇಜನ ಕೊಟ್ಟು, ಪ್ರೀತಿಯ ಆವರಣದಲ್ಲಿ ಗಂಡನನ್ನು ಕಾಪಾಡಿಕೊಂಡು ಬಂದರು." ರಾಮನ್ ಅವರ ಮೆಚ್ಚಿನ ಮಡದಿಯಾಗಿದ್ದ ಲೋಕಸುಂದರಿಯವರ ಗುಣಗಳನ್ನು **ಡಿವಿಜಿಯವರು,** ವಿ.ಸೀ. ಅವರು ಮನಸಾರೆ ಮೆಚ್ಚಿ, ಅವರ ಬರಹಗಳಲ್ಲಿ ದಾಖಲಿಸಿದ್ದಾರೆ. ಈ ದಂಪತಿಗಳನ್ನು



**ಸಿ.ವಿ. ರಾಮನ್ ಮತ್ತು ಶ್ರೀಮತಿ ಲೋಕಸುಂದರಿ**



**ಇಂದಿರಾಗಾಂಧಿ ರಾಷ್ಟ್ರೀಯ ಕೇಂದ್ರದ ಆವರಣದಲ್ಲಿ ಸರ್ ಸಿ.ವಿ. ರಾಮನ್ ಮತ್ತು ಶ್ರೀಮತಿ ಲೋಕಸುಂದರಿ**



**ವಿ. ಕಲ್ಯಾಣಂ ಅವರೊಂದಿಗೆ ವಿವಿಧ ಗಣ್ಯರು ಸಿ.ವಿ. ರಾಮನ್ ಅವರ ಮನೆಯ ಅಂಗಳದಲ್ಲಿ**

ಹತ್ತಿರದಿಂದ ಕಂಡಿದ್ದ ಸಿ.ವಿ. ರಾಮನ್ ಅವರ ಶಿಷ್ಯ ರಾಮಶೇಷನ್ ಅವರು ಲೋಕಸುಂದರಿ ಅವರ ಇನ್ನೊಂದು ಗುಣವಿಶೇಷವನ್ನು ಹೀಗೆ ವರ್ಣಿಸಿದ್ದಾರೆ;

**(ಪುಟ ೨೬ಕ್ಕೆ)**

(ಪು.೧೮ ರಿಂದ) ಪ್ರಶ್ನೋತ್ತರಗಳಲ್ಲಿ ಸರ್ ಸಿ.ವಿ. ರಾಮನ್...

"ಲೋಕಸುಂದರಿಯವರು ಸುಲಭಕ್ಕೆ ಒಗ್ಗದ ಗಡಸು ಜೀವ. ರಾಮನ್ ಅಂಥ ಗಂಡನೊಡನೆ ಸಹಬಾಳುವೆ ಮಾಡುವುದಕ್ಕೆ ಗಡುಸಾಗಿಲ್ಲದೆ ಇರುವುದು ಸಾಧ್ಯವಲ್ಲ! ರಾಮನ್ ತಪ್ಪಿದ್ದಾಗ, ನೀವು ತಪ್ಪು ಎಂದು ಹೇಳುವ ಧೈರ್ಯ ಅವರಿಗಿತ್ತು. ಬಿರುಗಾಳಿ ಯಂಥ ಮನುಷ್ಯನನ್ನು ಮನಸಾರೆ ಒಪ್ಪಿ ಕೈಹಿಡಿದಿದ್ದರು. ಅರವತ್ತೈದು ವರ್ಷಗಳ ಕಾಲ ಅದರ ಬಿರುಸುತಾಪಗಳನ್ನು ಹತೋಟಿಯಲ್ಲಿಡಲು ಹವಣಿಸಿದರು. ಆ ಬಿರುಗಾಳಿ ನಂದಿದಾಗ ತೀರ ಒಬ್ಬೊಂಟಿಯಾಗಿ ಬಿಟ್ಟರು". ಸಿ.ವಿ. ರಾಮನ್ ಮತ್ತು ಲೋಕಸುಂದರಿ ದಂಪತಿಗಳಿಗೆ ಇಬ್ಬರು ಮಕ್ಕಳಾದರು. ಹಿರೇಮಗನ ಹೆಸರು ಚಂದ್ರಶೇಖರ, ಹುಟ್ಟಿದ್ದು ೧೯೨೧ರಲ್ಲಿ. ಕಿರಿಯ ಮಗನ ಹೆಸರು ರಾಧಾಕೃಷ್ಣ, ಹುಟ್ಟಿದ್ದು ೧೯೨೯ರಲ್ಲಿ. ಈತ ಖಗೋಳಶಾಸ್ತ್ರ ದಲ್ಲಿ ಪರಿಣತಿ ಪಡೆದು ಆಸ್ಟ್ರೇಲಿಯಾದಲ್ಲಿ ದೊಡ್ಡ ವಿಜ್ಞಾನಿಯಾಗಿ ಸರ್ಕಾರದ ಸೇವೆ ಸಲ್ಲಿಸಿ, ರಾಮನ್ ಅವರ ನಿಧನದ ನಂತರ ಭಾರತಕ್ಕೆ ಹಿಂದಿರುಗಿ ಬಂದು, ತಂದೆ ಸ್ಥಾಪಿಸಿ ಬೆಳೆಸಿದ ರಾಮನ್ ಸಂಶೋಧನಾ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು.

ಸಿ.ವಿ. ರಾಮನ್ ಅವರ ಸಾಧನೆ, ಯಶಸ್ಸಿನ ಹಿಂದೆ ಹಾಗೂ ಸಂಶೋಧನಾ ಸಂಸ್ಥೆಗಳ ಕಟ್ಟುವಿಕೆಯಲ್ಲಿ ಸದ್ದಿಲ್ಲದ ಸೇವೆಯು ಕೆಲಸ ಮಾಡಿದೆ. ರಾಮನ್ ಅವರ ಕಾರ್ಯಚಟುವಟಿಕೆಗಳಿಗೆ, ಶೋಧನೆಗಳ ಸಾಫಲ್ಯಕ್ಕೆ ಅವರು ಸ್ಫೂರ್ತಿಯಾಗಿದ್ದರು. ರಾಮನ್ ಅವರ ದೇಶ-ವಿದೇಶಗಳ ಪ್ರವಾಸಗಳಲ್ಲಿ, ಅಕಾಡೆಮಿ ವಲಯಗಳ ವಿಶೇಷ ಭೇಟಿ-ಉಪನ್ಯಾಸಗಳ ಕಾರ್ಯಕ್ರಮಗಳಲ್ಲಿ ಲೋಕಸುಂದರಿ ಯವರು ಜೊತೆಯಲ್ಲೇ ಇರುತ್ತಿದ್ದರು. ಅವರ ಸಹನೆ ಸೀತಾದೇವಿ ಯಷ್ಟೇ ಮಹತ್ವದ್ದು. ಮಹಾಮೇಧಾವಿ ವಿಜ್ಞಾನಿಯ ಜೊತೆ ಬಾಳು ನಡೆಸುವುದು ದೊಡ್ಡಪರೀಕ್ಷೆ. ಅದರಲ್ಲಿ ಉತ್ತೀರ್ಣರಾಗುವುದು ಸುಲಭ ಸಾಧ್ಯವಲ್ಲ. ಈ ಸತ್ವಪರೀಕ್ಷೆಯಲ್ಲಿ ಲೋಕಸುಂದರಿಯವರು ಪೂರ್ಣ ಯಶಸ್ಸನ್ನು ಗಳಿಸಿದರು".

ರಾಮನ್ ಪ್ರಸಿದ್ಧಿಯ ಕಾಲದಲ್ಲಿ ಲೋಕಸುಂದರಿಯವರಿಗೆ 'ಲೇಡಿರಾಮನ್' ಎಂದು ಯಾರಾದರೂ ಕರೆದರೆ ಅವರಿಗೆ ಮುಜುಗರವಾಗುತ್ತಿತ್ತು. "ನನಗೆ ಬೇರೆ ಹೆಸರೂ ಇದೆ, ನನ್ನದಾಗಿ" ಎಂದು ಹೇಳುತ್ತಿದ್ದರು. ಅವರು ಸಾಕಷ್ಟು ಓದಿಕೊಂಡಿದ್ದರು, ಲೋಕಜ್ಞಾನವನ್ನು ಸಾಧಿಸಿಕೊಂಡಿದ್ದರು. ಗಂಡನಂತೆ ಅಸ್ಖಲಿತವಾಗಿ ಭಾಷಣ ಮಾಡುತ್ತಿದ್ದರು. ಮಕ್ಕಳ, ನಿರ್ಗತಿಕರ ಮತ್ತು ಅಂಗವಿಕಲರು ಮುಂತಾದವರ ಮಾನನೀಯ ಸೇವೆಯಲ್ಲಿ ವಿಶೇಷ ಕಾಳಜಿ ಹೊಂದಿದ್ದರು.

❑

[**ಗ್ರಂಥಗಳ ನೆರವು :** ೧. ವಿಖ್ಯಾತ ವಿಜ್ಞಾನಿ ರಾಮನ್ (ಜೀವನ-ಸಾಧನೆ - ಹಂಪನಾಗರಾಜಯ್ಯ, ೧೯೬೮., ೨. ರಾಮನ್ (ಚಂದ್ರಶೇಖರ ವೆಂಕಟರಾಮನ್ ಅವರ ಜೀವನ ಚಿತ್ರ)-ಬಿ.ಪಿ. ರಾಧಾಕೃಷ್ಣ, ೧೯೮೯; ೩. ಸರ್ ಸಿ.ವಿ. ರಾಮನ್ - ಪ್ರೊ. ಎಸ್.ವಿ. ಸುಬ್ರಹ್ಮಣ್ಯ, ೨೦೦೯, ಚಿತ್ರಗಳು: ಅಂತರಜಾಲ]